ಬೆಲೆ ಆದ್ಯತೆ, ಐ. ಎಸ್. ಐ ಮಾರ್ಕ್ ಇರುವ ವಸ್ತುಗಳಿಗೆ ಹೆಚ್ಚುವರಿಯಾಗಿ ಶೇಕಡ 2.5 ರಷ್ಟು ಬೆಲೆ ಆದ್ಯತೆ, ಕೆ. ಎಸ್. ಐ. ಎಂ. ಸಿ ಮೂಲಕ ಅತಿ ಸಣ್ಣ ಕೈಗಾರಿಕೆಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದಲ್ಲಿ ಶೇ. 50 ರಷ್ಟು ಇ. ಎಂ. ಡಿ. ಮತ್ತು ಸೆಕ್ಯುರಿಟಿ ಡಿಪಾಸಿಟ್‌ನಲ್ಲಿ ರಿಯಾಯಿತಿ ಇತ್ಯಾದಿ ಅನೇಕ ಸೌಲಭ್ಯಗಳನ್ನು ನೀಡುತ್ತಾ ಬಂದಿರುತ್ತದೆ. ಇದರಿಂದ ಅನೇಕ ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಸಹಾಯ ಸಿಕ್ಕಿರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಕುರಿತು.

2026 (2620) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ಪ್ರದೇಶದ ವಿಸ್ತೀರ್ಣವೆಷ್ಟು? (ತಾಲ್ಲೂಕು ವಾರು ವಿವರ ನೀಡುವುದು)

(ಆ) ಮಂಡ್ಯ ಜಿಲ್ಲೆಯಲ್ಲಿ ಇನ್ನೂ ಹೆಚ್ಚು ವಿಸ್ತೀರ್ಣದ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಉತ್ತೇಜಿಸಲು ರೈತರಿಗಾಗಿ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರ ಉದ್ದೇಶಿಸಿದೆಯೇ?

(ಇ) ರೈತರು ತಾವು ಬೆಳೆದ ರೇಷ್ಮೆಯನ್ನು ದೂರದ:ಮಾರುಕಟ್ಟೆಗೆ ಸಾಗಿಸಲು ಸಾರಿಗೆ ವಾಹನದ ಸೌಲಭ್ಯವಿಲ್ಲದೆ ತುಂಬು ಪ್ರಯಾಸ ಪಡುತ್ತಿರುವುದನ್ನು ಸರ್ಕಾರವು ಮನಗಂಡಿದೆಯೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಮಂಡ್ಯ ಜಿಲ್ಲೆಯ ಒಟ್ಟು ಹಿಪ್ಪುನೇರಳೆ ವಿಸ್ತೀರ್ಣ 12216.37 ಹೆಕ್ಟೇರ್‌ಗಳು. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನಮೂದಿಸಿದೆ.

(ಆ) 2000-2001ನೇ ವರ್ಷದಲ್ಲಿ ಮಂಡ್ಯ ಜಿಲ್ಲೆಯಲ್ಲಿ 450 ಹೆಕ್ಟೇರ್ ಹೆಚ್ಚಿನ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

(ಇ) ಮಂಡ್ಯ ಜಿಲ್ಲೆಯ ರೇಷ್ಮೆ ಬೆಳೆಗಾರರು ತಾವು ಬೆಳೆದಂತಹ ಮಿಶ್ರತಳಿ ಗೂಡುಗಳನ್ನು ಮಂಡ್ಯ ಜಿಲ್ಲೆಯ ಮಳವಳ್ಳಿ ಹಾಗೂ ಅಕ್ಕಪಕ್ಕದ ಜಿಲ್ಲೆಯ ಮೂರುಕಟ್ಟೆಗಳಾದ ಕೊಳ್ಳೇಗಾಲ, ಸಂತೇಮರಹಳ್ಳಿ, ರಾಮನಗರ, ಚನ್ನಪಟ್ಟಣ ಇತರೆ ಪ್ರಮುಖ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿರುತ್ತಾರೆ. ದ್ವಿತಳಿ ಬಿತ್ತನೆ ಗೂಡುಗಳನ್ನು ಕೆ.ಆರ್. ಪೇಟೆಯ ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುತ್ತಾರೆ. ಈ ಮಾರುಕಟ್ಟೆಗಳಲ್ಲಿ ಹೆಚ್ಚು ಪ್ರಮಾಣದ ರೀಲರ್‌ಗಳ ಗೂಡು ಖರೀದಿಸಲು ಬರುವುದರಿಂದ ಸ್ಪರ್ಧಾತ್ಮಕ ಬೆಲೆಗಳು, ದೊರಕುತ್ತವೆಂಬುವ ಉದ್ದೇಶದಿಂದ ಈ ಜಿಲ್ಲೆಯ ರೈತರು ಸದರಿ ಮಾರುಕಟ್ಟೆಗಳಲ್ಲಿ ಗೂಡುಗಳನ್ನು ಮಾರಾಟ ಮಾಡುತ್ತಿದ್ದು, ಒಳ್ಳೆಯ ಧಾರಣೆಗಳೂ ಸಹ ರೈತರಿಗೆ ದೊರಕುತ್ತಿದೆ.

ಮಂಡ್ಯ ಜಿಲ್ಲೆಯಿಂದ ರಾಜ್ಯದ ಎಲ್ಲಾ ಸ್ಥಳಗಳಿಗೂ ಹಾಗೂ ಮೇಲ್ಕಂಡ ಗೂಡು ಮಾರುಕಟ್ಟೆ ಸ್ಥಳಗಳಿಗೆ ಸಾರಿಗೆ ಸಂಪರ್ಕದ ವ್ಯವಸ್ಥೆ ಉತ್ತಮವಾಗಿರುತ್ತದೆ. ಆದ್ದರಿಂದ, ಸದರಿ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಗೂಡುಗಳನ್ನು ಸಾಗಿಸಲು ಯಾವುದೇ ಅನಾನುಕೂಲವಿರುವುದಿಲ್ಲ.

ನಗರಸಭೆ ಮತ್ತು ಪುರಸಭೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿ.

2027 (2621) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ನಗರಸಭೆ ಮತ್ತು ಪುರಸಭೆಗಳಲ್ಲಿ ಪೌರಕಾರ್ಮಿಕರು, ಗ್ಯಾಂಗ್ ಮನೆ, ಕುಡಿಯುವ ನೀರು ಸರಬರಾಜು ಮಾಡುವ ಸಿಬ್ಬಂದಿ ಹಾಗೂ ಇತರೆ ಖಾಲಿ ಇರುವ ಹುದ್ದೆಗಳು ಎಷ್ಟು?

(ಆ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

(ಇ) ಪೌರಕಾರ್ಮಿಕರ ಕೊರತೆಯಿಂದಾಗಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ಶುಚಿತ್ವ ಕಾಪಾಡುವುದಕ್ಕೆ ಸಾಧ್ಯವಾಗದೆ ಸಮಸ್ಯೆಯಾಗಿರುವುದನ್ನು ಸರ್ಕಾರವು ಮನಗಂಡಿದೆಯೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ರಾಜ್ಯದ ನಗರಸಭೆ, ಪುರಸಭೆಗಳಲ್ಲಿ ಪೌರಕಾರ್ಮಿಕರು, ಗ್ಯಾಂಗ್ ಮನ್, ಕುಡಿಯುವ ನೀರು ಸರಬರಾಜು ಮಾಡುವವರು ಒಟ್ಟು 3244ಹುದ್ದೆಗಳು ಖಾಲಿ ಇರುತ್ತವೆ. ಹುದ್ದೆವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಖಾಲಿ ಇರುವ ಹುದ್ದೆಗಳ ವಿವರ

1.	ಪೌರಕಾರ್ಮಿಕರು,	2853 ಹುದ್ದೆಗಳು
2.	ಗ್ಯಾಂಗ್‌ಮನ್,	51 ಹುದ್ದೆಗಳು
3.	ಕುಡಿಯುವ ನೀರು ಸರಬರಾಜು ಮಾಡುವ ಸಿಬ್ಬಂದಿ	340 ಹುದ್ದೆಗಳು

(ಆ) ಸರ್ಕಾರವು ಮಿತವ್ಯಯ ಸಾಧಿಸುವ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ತುಂಬದಿರಲು ಸರ್ಕಾರದ ಸುತ್ತೋಲೆ ಸಂಖ್ಯೆ. ಎಫ್. ಡಿ. 01 ಬಿ.ಇ.ಎಂ. 98 ದಿನಾಂಕ 23.10.98ರಲ್ಲಿ ನಿಷೇದ ಇರುವುದರಿಂದ ಖಾಲಿ ಹುದ್ದೆಗಳು ಇನ್ನು ಭರ್ತಿಮಾಡಿರುವುದಿಲ್ಲ.

(ಇ) ಸರ್ಕಾರ ಇದನ್ನು ಗಮನಿಸಿದೆ. ಆದರೆ ನಗರ ಮತ್ತು ಪಟ್ಟಣ ಪ್ರದೇಶಗಳ ನೈರ್ಮಲ್ಯವನ್ನು ಕಾಪಾಡಲು ಸಾಧ್ಯವಾಗುವಂತೆ ಖಾಸಗಿಯವರಿಂದ ಟೆಂಡರ್ ಕರೆದು ಗುತ್ತಿಗೆ ಮೇರೆಗೆ ಈ ಕೆಲಸ ವಹಿಸಲು ಸರ್ಕಾರಿ ಸುತ್ತೋಲೆ ಸಂಖ್ಯೆ ನ.ಆ.ಇ. 168 ಜಿ.ಇ.ಎಲ್. 93 ದಿನಾಂಕ 19.11.93 ರನ್ವಯ ನಿರ್ದೇಶನ ನೀಡಿದೆ.